8. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯವರು ಟಿಕೇಟ್ ದರವನ್ನು ಹೆಚ್ಚಿಸಿರುವುದು

ಶ್ರೀವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನಾನು ಸದನದಲ್ಲಿ ಕ್ರಿಕೆಟ್ ಸಂಸ್ಥೆಯವರು ಕ್ರಿಕೆಟ್ ಪಂದ್ಯದ ಟಿಕೆಟ್‌ಗಳ ದರಗಳನ್ನು ಹೆಚ್ಚಾಗಿ ನಿಗಧಿಪಡಿಸಿದ್ದಾರೆ, ಟಿಕೆಟ್‌ಗಳು ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ, ಅದು ವ್ಯವಸ್ಥಿತವಾಗಿ ವಿತರಣೆ ಆಗುತ್ತಿಲ್ಲ, ಅದು ಜನಸಾಮಾನ್ಯರಿಗೆ ತಲುಪುತ್ತಿಲ್ಲ, 100 ರೂ. ಟಿಕೆಟ್ ದರದವು 2-3 ಸಾವಿರ ರೂ.ಗಳಿಗೆ ಮಾರಾಟವಾಗುತ್ತಿವೆ, ಸರ್ಕಾರ ಇದರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕ್ರಿಕೆಟ್ ಸಂಸ್ಥೆ ಸರ್ಕಾರದ ಹಿಡಿತದಲ್ಲಿ ಇಲ್ಲ ಎಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗಿದೆ. ಸರ್ಕಾರವೇ ಕ್ರಿಕೆಟ್ ಸಂಸ್ಥೆಗೆ ಕ್ರೀಡಾಂಗಣದ ಜಾಗವನ್ನು ಕೊಟ್ಟಿದೆ. ಕ್ರಿಕೆಟ್ ಪಂದ್ಯದ ಉಸ್ತುವಾರಿಯನ್ನೂ ಸಹ ಪೊಲೀಸರ ಮೂಲಕ ಸರ್ಕಾರವೇ ನೋಡಿಕೊಳ್ಳುತ್ತದೆ. ಹೀಗೆ ಪ್ರತಿಯೊಂದರಲ್ಲೂ ಸರ್ಕಾರ ಸಂಸ್ಥೆಗೆ ಸಹಾಯ ಮಾಡುತ್ತಿದೆ. ಆದರೆ ಕ್ರಿಕೆಟ್ ಸಂಸ್ಥೆ ಟಿಕೆಟ್ ದರ ನಿಗದಿಪಡಿಸುವಲ್ಲಿ ಮತ್ತು ಮಾರಾಟ ವ್ಯವಸ್ಥೆಯಲ್ಲಿ ಅಚಾತುರ್ಯ ಮತ್ತು ಅವಿವೇಕತನ ತೋರಿಸಿದೆ. ಇದೆಲ್ಲಾ ವಿಷಯಗಳ ಬಗ್ಗೆ ನಿನ್ನೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಕ್ರಿಕೆಟ್ ಸಂಸ್ಥೆಯನ್ನು ಬೆಳಸಲು ಅನೇಕರು ತ್ಯಾಗ ಮತ್ತು ಹೋರಾಟ ಮಾಡಿದ್ದಾರೆ. ಹಿಂದೆ ಮಾನ್ಯ ಮಲ್ಲಾರಾಧ್ಯನವರು, ಮಾನ್ಯ ತಿಮ್ಮಪ್ಪಯ್ಯನವರು, ಮಾನ್ಯ ಸಿ. ನಾಗರಾಜ್‌ರವರು, ಮಾನ್ಯ ಕೆ.ಸಿ. ದೇಸಾಯಿನವರಂತಹ ಅನೇಕ ಮಹನೀಯರು ತ್ಯಾಗ ಹಾಗೂ ಹೋರಾಟದ ಫಲವಾಗಿ ಕ್ರಿಕೆಟ್ ಸಂಸ್ಥೆ ಬೆಳೆದಿದೆ. ಆದರೆ ಈ ಸಂಸ್ಥೆಯವರು ಸರ್ಕಾರವನ್ನು ಕಡೆಗಾಣಿಸಿದ್ದಾರೆ. ಇವತ್ತು ಜನಸಾಮಾನ್ಯರಿಗೆ ಬೇಕಾಗಿರತಕ್ಕಂಥದ್ದು ನೂರು ರಾಪಾಯಿ ಅಥವಾ ಸಾವಿರ ರೂಪಾಯಿ ಮೌಲ್ಯದ ಟಿಕೆಟ್‌ಗಳಲ್ಲ. ದೊಡ್ಡ ದೊಡ್ಡ ಬಾಕ್ಸ್‌ಗಳನ್ನು ಮಾಡಿ ಇವತ್ತು ಅಲ್ಲಿ ಲೂಟಿ ಮಾಡತಕ್ಕಂಥ ಕೆಲಸ ಕ್ರಿಕೆಟ್ ಸಂಸ್ಥೆಯಿಂದ ನಡೆದಿದೆ. ನಿನ್ನೆ ನಾನು ಈ ಬಗ್ಗೆ ಪ್ರಸ್ತಾಪಿಸಿದಾಗ ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಅಧ್ಯಕ್ಷರ ಪೀಠದಲ್ಲಿದ್ದವರು ಹೇಳಿದ್ದರು. ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು. ಸರ್ಕಾರದ ಅಧೀನದಲ್ಲಿ ಈ ಸಂಸ್ಥೆ ಬರಬೇಕು, ಅದಕ್ಕೆ ಯಾವ ರೀತಿಯಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ದಯಮಾಡಿ ಇದರ ಬಗ್ಗೆ ಉತ್ತರ ಕೊಡಬೇಕೆಂದು ಅತ್ಯಂತ ಕಳಕಳಿಯಿಂದ ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜೀನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿರತಕ್ಕದ್ದರ ಬಗ್ಗೆ ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ವಿಷಯ ಪ್ರಸ್ತಾಪ ಮಾಡುತ್ತಿರುವಾಗ ಎಲ್ಲೋ ಒಂದು ಕಡೆ ನಾವು ಶಾಸಕರು ಎಲ್ಲರಿಗಿಂತ ಭಿನ್ನ ಎನ್ನುವಂತಹ ಒಂದು ಭಾವನೆ ನನಗೆ ಬರುತ್ತಿದೆ. ಇವತ್ತು ನಮ್ಮನ್ನು ಜನ ಸೀರಿಯಸ್ ಆಗಿ ತೆಗೆದುಕೊಳ್ಳಬೇಕೇ ಹೊರತು ನಮ್ಮನ್ನು ನಾವೇ ಸೀರಿಯಸ್ಸಾಗಿ ತೆಗೆದುಕೊಳ್ಳಬಾರದು. ಸ್ಪೋರ್ಟ್ಸ್‌ನಲ್ಲಿ ರಾಜಕೀಯ ಹೋಗುವುದಕ್ಕಿಂತ ರಾಜಕೀಯದಲ್ಲಿ ಸ್ಪೋರ್ಟ್ಸ್ ಬರಬೇಕಾಗಿದೆ. ಇವತ್ತು

ಒಂದು ಸಂಸ್ಥೆ ನಡೆಯುತ್ತಿದೆ. ಇವತ್ತು ಸರ್ಕಾರಿ ಸಂಸ್ಥೆಗಳನ್ನೇ ನಾವು ಎಲ್ಲಾ ಕಡೆಯೂ ಕೂಡ ಖಾಸಗೀಕರಣ ಮಾಡಲು ಹೋಗುತ್ತಿರುವಾಗ, ಎಲ್ಲಾ ಕಡೆಯೂ ಸ್ವಾಯತ್ತ ಸಂಸ್ಥೆಗಳೇ ಹೆಚ್ಚಾಗಿ ಇರಲಿ ಎಂದು ನಾವು ಹೇಳುತ್ತಿರುವಾಗ, ಕ್ರಿಕೆಟ್ ಸಂಸ್ಥೆಯನ್ನು ಸರ್ಕಾರದ ಅಧೀನಕ್ಕೆ ತರಬೇಕು ಎಂಬುದು ಸರಿಯಲ್ಲ. ಟೆಸ್ಟ್ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದಂತಹ ಕರ್ನಾಟಕದವರೇ ಆದ ಮಾಜಿ ಟೆಸ್ಟ್ ಆಟಗಾರರೊಬ್ಬರು ಈ ಸಂಸ್ಥೆಯನ್ನು ಈಗ ನಡೆಸುತ್ತಿದ್ದಾರೆ. ಅಲ್ಲಿ ಏನಾದರೂ ಲೋಪವಿದ್ದರೆ, ನಾವು ಆ ಲೋಪವನ್ನು ಎತ್ತಿ ತೋರಿಸೋಣವೇ ಹೊರತು, ಅದಕ್ಕೊಬ್ಬ ಆಡಳಿತಾಧಿಕಾರಿಯನ್ನು ನೇಮಿಸೋಣ, ಅದನ್ನೂ ಕೂಡ ಸರ್ಕಾರದ ಅಧೀನಕ್ಕೆ ತರೋಣ ಎನ್ನುವುದು ಸರಿಯಾದ ಧೋರಣೆ ಆಗಲಿಕ್ಕಿಲ್ಲ. ಕರ್ನಾಟಕದ ಕ್ರೀಡಾ ಪ್ರೇಮಿಗಳೇನಿದ್ದಾರೆ, ಅವರ ಭಾವನೆಗಳಿಗೆ ಧಕ್ಕೆ ಮಾಡುವಂತಹ ಕೆಲಸ ಈ ಸದನದಿಂದ ಆಗಬಾರದು ಎಂಬ ಕಳಕಳಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ, ಇದೇ ಮೊದಲ ಬಾರಿಗೆ ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಆಡಳಿತವು ವೃತ್ತಿ ಪರರ ಕೈಗೆ ಹೋಗಿದೆ. ಟೆಸ್ಟ್ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದವರು ಅದರ ಆಡಳಿತ ನಡೆಸುತ್ತಿದ್ದಾರೆ. ಹೀಗಿರುವಾಗ ಅದರ ಬಗ್ಗೆ ವಿನಾಕಾರಣ ನಾವು ದೂರುವುದು ಬೇಡ. ಏನಾದರೂ ಸಮಸ್ಯೆಗಳು ಇದ್ದರೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳಾಗಲೀ ಅಥವಾ ಬೇರೆ ಯಾರಾದರೂ ಆಗಲಿ ಅಲ್ಲಿಯ ಪದಾಧಿಕಾರಿಗಳನ್ನು ಕರೆದು ಮಾತನಾಡಲಿ. ಆದರೆ ಈ ಸದನದ ಮೂಲಕ ಅಂತಹ ಒಂದು ಸಂಸ್ಥೆಯ ವಿರುದ್ಧ ನಾವೆಲ್ಲಾ ರಿಪ್ಲೆಕ್ಷನ್ ತರುವಂಥಾದ್ದು ಯೋಗ್ಯವಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ, ಇದರ ಬಗ್ಗೆ ತಾವೇ ಉತ್ತರ ಹೇಳಬಹುದಲ್ಲವೇ ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸಭಾಧ್ಯಕ್ಷರೇ, I can only say that sportsmanship should be allowed in politics, but no politics should be allowed in sports.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ವಿಚಾರವೇ ಬೇರೆ. ಇಲ್ಲಿ ನಾನು ರಾಜಕಾರಣ ಮಾಡುವಂಥಾದ್ದು ಏನೂ ಇಲ್ಲ. ಆ ಸಂಸ್ಥೆಯ ಬಗ್ಗೆ ನಮ್ಮದೇನೂ ಅಗೌರವ ಇಲ್ಲ. ಕಾಳಸಂತೆಯಲ್ಲಿ ಸಾವಿರ ರೂ. ಮೌಲ್ಯದ ಟಿಕೆಟ್ ಐದು ಸಾವಿರ ರೂ.ಗಳಿಗೆ ಮಾರಾಟವಾಗುತ್ತಿದೆ. ಹೀಗಾದರೆ ಜನಸಾಮಾನ್ಯರ ಗತಿ ಏನು ಎಂಬುದು ನನ್ನ ಕಳಕಳಿ. ಇದರ ಬಗ್ಗೆ ದಯವಿಟ್ಟು ಸದನದಲ್ಲೇ ಇರುವ ಸಂಬಂಧಪಟ್ಟ ಸಚಿವರಿಂದ ನನಗೆ ಉತ್ತರ ಕೊಡಿಸಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಸಂಸ್ಕೃತಿ ಮತ್ತು ಯುವಜನ ಸೇವಾ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿಯ ಶಾಸಕರ ಅನಿಸಿಕೆಗಳ ಬಗ್ಗೆ ನಿನ್ನೆ ಕೂಡ ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದ್ದರಂತೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಇದರ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ಯೋಚಿಸಿದ್ದೇನೆ. 50 ಸಾವಿರ ಜನ ಕುಳಿತುಕೊಳ್ಳತಕ್ಕ

ಅವಕಾಶ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿದೆ. ಭರವಸೆ ಸಮಿತಿಯಲ್ಲೂ ಕೂಡ ಇದರ ಬಗ್ಗೆ ಕೂಲಂಕುಷವಾಗಿ ಎಲ್ಲಾ ಶಾಸಕರೂ ಕೂಡ ಚರ್ಚೆ ಮಾಡಿ, ಶಾಸಕರಿಗೆ ಅವರ ಗೌರವಕ್ಕೆ ಧಕ್ಕೆ ಬಾರದಂತೆ ಪಾಸ್‌ಗಳು ಹಾಗೂ ಕೇಳಿದಾಗ ಟಿಕೆಟ್‌ಗಳನ್ನು ಕೊಡಬೇಕೆಂದು ಕೂಡ ಸಮಿತಿ ತೀರ್ಮಾನ ಮಾಡಿದೆ. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ನಾನು ಇವತ್ತು 12 ಗಂಟೆಗೆ ಮೀಟಿಂಗ್‌ಗೆ ಬರಬೇಕೆಂದು ಮಾನ್ಯ ಬ್ರಿಜೇಶ್ ಪಟೇಲ್‌ರವರನ್ನು ಕರೆದಿದ್ದೆ. ನೀವು ಪಾಸ್‌ಗಳನ್ನು ಎಷ್ಟು ಕೊಡಲು ಸಾಧ್ಯ? ಟಿಕೆಟ್‌ಗಳು ಏನಾದರೂ ಉಳಿದಿವೆಯೇ? ದುಡ್ಡು ಕೊಟ್ಟು ಬೇಕಾದರೂ ಶಾಸಕರು ಟಿಕೆಟ್‌ಗಳನ್ನು ಕೊಂಡುಕೊಳ್ಳಲು ಸಿದ್ಧವಾಗಿದ್ದಾರೆ ಎಂದು ನಾನು ಅವರನ್ನು ಕೇಳಬೇಕೆಂದಿದ್ದೆ. ಆದರೆ ಒಂದು ಗಂಟೆಯಾದರೂ ಕೂಡ ಅವರು ಬರಲೇ ಇಲ್ಲ. ನನಗೆ ಇವತ್ತು ಎಲ್ಲರೂ ಕೂಡ ಕ್ರಿಕೆಟ್ ಪಂದ್ಯದ ಪಾಸ್‌ಗಳು ಮತ್ತು ಟಿಕೆಟ್‌ಗಳಿಗಾಗಿ ಒತ್ತಾಯಿಸುತ್ತಿದ್ದಾರೆ. ನನಗೆ ಏನು ಟಿಕೆಟ್‌ಗಳು ಬರುತ್ತವೆಯೋ ಅವುಗಳನ್ನು ಮಾನ್ಯ ಅಧ್ಯಕ್ಷರ ಕಡೆಗೆ ಕಳುಹಿಸಿಕೊಡುತ್ತೇನೆ ಎಂದು ನಾನು ಅವರಿಗೆ ಹೇಳಿದೆ.

ಅಧ್ಯಕ್ಷರು : ದಯವಿಟ್ಟು ಅವುಗಳನ್ನು ನನಗೆ ಕಳುಹಿಸಿಕೊಟ್ಟು ಅದರ ಜವಾಬ್ದಾರಿಯನ್ನು ನನಗೆ ವಹಿಸಬೇಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ನಾನು ಹೇಳುವುದು ಕೇಳಿ. ಈಗೇನಾಗುತ್ತಿದೆ ಎಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಆಗಲೇ ಹೇಳಿದರು ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವು ಪಾಸ್ ಕೇಳುವುದಿಲ್ಲ, ನಮಗೆ ಪಾಸ್ ಕೊಟ್ಟರೂ ಬೇಕಾಗಿಲ್ಲ. ಅವರ ಪಾಸ್‌ಗಳಿಗೋಸ್ಕರ ನಾವು ಶಾಸಕರುಗಳು ಕಾದಿಲ್ಲ. ಯಾವ ಶಾಸಕರಿಗೂ ಕೂಡ ಅವರ ಪಾಸ್ ಬೇಕಾಗಿಲ್ಲ. ನಮಗ್ಯಾರಿಗೂ ಅವರು ವಿಶೇಷವಾದಂತಹ ಅಭಿಮಾನ ತೋರಿಸಬೇಕಾಗಿಲ್ಲ. ನನ್ನ ಪ್ರಶ್ನೆ ಏನೆಂದರೆ, ಜನಸಾಮಾನ್ಯರಿಗೆ ಕೈಗೆ ಎಟುಕಲಾರದಂತಹ ರೀತಿಯಲ್ಲಿ ಟಿಕೇಟ್ ದರ ಕನಿಷ್ಠ ರೂ. 100 ಇದ್ದದ್ದನ್ನು ರೂ.200 ಮಾಡಿದ್ದಾರೆ, ಇದು ಸರಿಯಲ್ಲ. ಅವರು ಕೊಟ್ಟರೂ ಸಹ ಶಾಸಕರಿಗೆ ಪಾಸ್ ಖಂಡಿತಾ ಬೇಕಾಗಿಲ್ಲ. ನನಗಂತೂ ಅದು ಬೇಕಾಗಿಯೇ ಇಲ್ಲ. ಹೀಗಾಗಿ ನಾನು ಅವರನ್ನು ಪಾಸ್ ಕೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಈ ಸದನದ ಗೌರವಾನ್ವಿತ ಶಾಸಕರೂ ಕೂಡ ಇಷ್ಟು ಗೋಗರೆದು ನಮಗೆ ಟಿಕೇಟ್ ಕೊಡಿ ಎಂದು ಕೇಳತಕ್ಕಂಥದ್ದು ನಮಗೆ ಸರಿ ಕಾಣಿಸುವುದಿಲ್ಲ. 50,000 ಜನ ಕುಳಿತುಕೊಳ್ಳುವ ಪೆವಿಲಿಯನ್, ಸರ್ಕಾರದ ಪ್ರತಿನಿಧಿಗಳು, ಮಂತ್ರಿಗಳು ಕಾಗದ ಬರೆದಿದ್ದಾರೆ, ಮುಖ್ಯ ಮಂತ್ರಿ ಕಛೇರಿಯಿಂದ ಕಾಗದ ಬಂದಿದೆ ಇಷ್ಟು ಪಾಸ್ ಕಳುಹಿಸಿ ಎಂದು ಪತ್ರ ಬರೆದಿದ್ದಾರೆ. ಆದರೆ ಇದು ಸರಿಯಲ್ಲ.

SRI. M. VEERAPPA MOILY : He is not the Secretary of your

department. ಅವರಿಗೆ ಅಲ್ಲಿ ಎಷ್ಟು ಟೆನ್‌ಷನ್ ಇದೆ, ಎಷ್ಟು ಕೆಲಸ ಇದೆ, ತಾವು ದಯಮಾಡಿ ಅವರನ್ನು ಕರೆದು ಮಾತನಾಡುವುದು ಎಲ್ಲಾ ಏಕೆ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾನು ಕಮಿಷನರ್‌ರವರಿಗೆ 4-3-99ರಂದು ಪತ್ರ ಬರೆದಿದ್ದೆ, ಟಾಪ್ ಪ್ರಿಯಾರಿಟಿ ಮೇಲೆ ತಾವು ಈ ಮ್ಯಾಟರ್ ಕನ್ಸಿಡರ್ ಮಾಡಬೇಕು, ಸರ್ಕಾರಕ್ಕೆ ಒತ್ತು ಕೊಡಬೇಕೆಂದು ಪತ್ರ ಬರೆದಿದ್ದೇನೆ ಉತ್ತರ ಕೊಟ್ಟಿಲ್ಲ. ನಾನು ಇವತ್ತು ಕರೆದರೂ ಬಂದಿಲ್ಲ. He should have some courtesy. ಏನು ಬೇಕು, ಎಷ್ಟು ಬೇಕು ಎಂದು ಕೇಳುವ ಸೌಜನ್ಯ ಆದರೂ ಬೇಕು. 50,000 ಜನ ಕುಳಿತುಕೊಳ್ಳುವ ಪೆವಿಲಿಯನ್‌ನಲ್ಲಿ ಸರ್ಕಾರದ ಪತ್ರಕ್ಕೆ .....

ಶ್ರೀ ವಾಟಾಳ್ ನಾಗರಾಜ್ : ನಮಗೆ ಪಾಸ್ ಬೇಕಾಗಿಲ್ಲ. ನಮಗೆ ಏನಾಗಿದೆ ಎಂದರೆ, ಬ್ಲಾಕ್ ಮಾರ್ಕೆಟ್ ಆಗುವುದು ಬೇಡ. ಅದನ್ನು ನಿಲ್ಲಿಸಬೇಕು. ಜನಸಾಮಾನ್ಯರಿಗೆ ಟಿಕೆಟ್ ದೊರಕುತ್ತಿಲ್ಲ ಅದನ್ನು ಹೇಳುತ್ತಿದ್ದೇವೆಯೇ ಹೊರತು, ಶಾಸಕರಿಗೋಸ್ಕರ ಪಾಸ್ ಕೊಡಿ ಎಂದು ಪತ್ರ ಬರೆಯಬೇಕಾಗಿಲ್ಲ.

ಅಧ್ಯಕ್ಷರು : ಬ್ಲಾಕ್ ಮಾರ್ಕೆಟ್ ವಿಚಾರ ಗೃಹಸಚಿವರು ಬಂದಾಗ ಅವರಿಂದ ಉತ್ತರ ಹೇಳಿಸೋಣ. ಈಗ ಸದನವನ್ನು 3-30 ಘಂಟೆವರೆಗೆ ಮುಂದೂಡುತ್ತಿದ್ದೇವೆ.

ಸದನವು 2.35 ಕ್ಕೆ ಮುಂದೂಟಲ್ಪಟ್ಟು ಪುನಃ 3.30 ಕ್ಕೆ ಸೇರಲು ನಿರ್ಧರಿಸಿತು.)

(ಸದನವು 3 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀರಮೇಶ್ ಕುಮಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ನಾವು ಇನ್ನೂ ಒಂದು ದಿವಸ ಸದನ ಸಮಾವೇಶಗೊಳ್ಳುವುದು ಅನಿವಾರ್ಯವಾಗಿದೆ. ಇವತ್ತು 4ಗಂಟೆಗೆ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸೇರುತ್ತದೆ. ಆಗ ತಮಗೆ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಹೇಳಿಕಳುಹಿಸುತ್ತೇವೆ. we cannot adjourn, lot of business has remained...

ಬೈವಾಟರ್ ಮತ್ತು ಸಿ. ಎಂ. ರಿಪ್ಲೈ ಇವೆರಡನ್ನು ಸೋಮವಾರಕ್ಕೆ ಹಾಕಿಕೊಳ್ಳೋಣ. ಉಳಿದವುಗಳನ್ನು ಈ ದಿನವೇ ಕವರ್ ಮಾಡೋಣ. ನಾವು ಬಿ.ಎ.ಸಿ. ಮೀಟಿಂಗ್ ಮುಗಿಸಿ ಬರುವವರೆಗೆ ಬೇರೆ ಬಿಲ್ಲುಗಳು ಏನಿವೆ ಅವುಗಳ ಬಗ್ಗೆ ಚರ್ಚೆ, ನಂತರ ಶೂನ್ಯ ವೇಳೆ ಮುಂತಾದವು ನಡೆಯುತ್ತಿರಲಿ. ಗ್ರಾಮಪಂಚಾಯತ್ ಬಿಲ್ಲಿನ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ತಾವು ಬಂದ ಮೇಲೆ ಪ್ರಾರಂಭ ಆಗಲಿ. ನಿನ್ನೆ ಬಿ.ಡಿ.ಎ.ಬಿಲ್ ಬಗ್ಗೆ ಚರ್ಚೆ ಇನ್‌ಕನ್‌ಕ್ಲೂಸಿವ್ ಆಗಿದೆಯೇ ?

ಶ್ರೀ. ವಾಟಾಳ್ ನಾಗರಾಜ್ : ನಿನ್ನೆ ಬಿ.ಡಿ.ಎ.ಬಿಲ್ ಬಗ್ಗೆ ಚರ್ಚೆಯಾದಾಗ ಇವತ್ತು ಬೆಳಿಗ್ಗೆ ಎಲ್ಲಾ ಪಕ್ಷದ ಸದಸ್ಯರನ್ನು ಕರೆದು ಮಾತನಾಡುತ್ತೇವೆಂದು ಹೇಳಿ ಆ ಮೇಲೆ ಮಂಡಿಸೋಣ ಎಂದು ಹೇಳಿದ್ದರು. ಅದು ಸಣ್ಣವಿಚಾರ ಇದ್ದು ಅದು ಬದಲಾವಣೆ ಆಗಬೇಕಾಗುತ್ತದೆ...

ಶ್ರೀ. ಎಸ್. ಸುರೇಶ್ ಕುಮಾರ್ : ಬಿ. ಡಿ. ಎ. ಮಸೂದೆ ತಂದಿರುವುದು, ಅದರ ಉಪಯುಕ್ತತೆ ಎಲ್ಲರಿಗೂ ಗೊತ್ತಾಗಬೇಕಾಗುತ್ತದೆ ಮತ್ತು 2-3 ಕ್ಲಾರಿಫಿಕೇಷನ್ ಇವೆ.

ಅಧ್ಯಕ್ಷರು : ಒಂದು ಕೆಲಸ ಮಾಡೋಣ even if we sit for little late, we will come to a consenses about it; We can take it up, since we have already discussed it ...

ಶ್ರೀ. ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾವು ಧರಣಿ ನಡೆಸುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಇವತ್ತು ಒಂದು ದಿವಸ ಬೇಡ.

ಶ್ರೀ. ವಾಟಾಳ್ ನಾಗರಾಜ್ : ಧರಣಿ ನಡೆಸುವುದಕ್ಕೆ ನಮಗೆ ಅವಕಾಶ ತಾವು ಕೊಡುವುದಿಲ್ಲವೇ?

ಅಧ್ಯಕ್ಷರು : ನಿಜ ಹೇಳುತ್ತೇನೆ, ನಮಗೆ ನಾಳೆ ಬಹಳ ದುಃಖದ ದಿವಸ. ಅಂದರೆ ನಾಳೆ ಗುಡ್‌ಫ್ರೈಡೆ ಆಗಿರುತ್ತದೆ. ನಾನು ಇನ್‌ಫೆಂಟ್ ಜೀಸಸ್‌ನ ಪಾಲೋಯರ್. ನನಗೆ ಆ ಟ್ರೆಂಡ್ ಏಕೋ ಇವತ್ತೇ ಸೆಟ್‌ಇನ್ ಆಗಿಬಿಟ್ಟಿದೆ. ನಾಳೆ ಇರಬೇಕಾದ ದುಃಖ ಇವತ್ತೇ ಪ್ರಾರಂಭವಾಗಿದೆ. ಇವತ್ತು ಒಂದು ದಿವಸಕ್ಕೆ ಧರಣಿ ಏನೂ ಬೇಡ. ಸ್ವಲ್ಪ ಬೇರೆ ವಿಷಯಗಳ ಬಗ್ಗೆ ಕುಳಿತು ಚರ್ಚೆ ಮಾಡೋಣ.

ಶ್ರೀ. ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಹತ್ತಿ ಬೀಜದ ದರವನ್ನು ಜಾಸ್ತಿ ಮಾಡಿದ್ದರಿಂದ ರೈತರು ಧರಣಿ ಪ್ರಾರಂಭಿಸಿದ್ದಾರೆ, ಹೆಗ್ಗಡದೇವನಕೋಟೆಯಲ್ಲಿ ರೈತರ ಮೇಲೆ ಪೋಲೀಸರಿಂದ ಧಾಳಿಯಾಗಿದೆ.

ಅಧ್ಯಕ್ಷರು : ಬಹಳ ಜನ ಬಹಳಷ್ಟು ವಿಷಯಗಳ ಮೇಲೆ ನೋಟೀಸಸ್ ಕೊಟ್ಟಿದ್ದಾರೆ. ಅವರೆಲ್ಲರಿಗೂ ಅವಕಾಶ ಕೊಡಬೇಕು. ಆಗ ತಮಗೂ ಅವಕಾಶ ಕೊಡುತ್ತೇನೆ.

ಶ್ರೀ. ವಾಟಾಳ್ ನಾಗರಾಜ್ : ಅದಕ್ಕೆ ನಾನು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಅನ್ಯಾಯವನ್ನು ಪ್ರತಿಭಟಿಸಿ ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀ. ವಾಟಾಳ್ ನಾಗರಾಜ್ ಅವರು ಧರಣಿ ಕುಳಿತುಕೊಳ್ಳಲು ಸದನದ ಬಾವಿಗೆ ಆಗಮಿಸಿದರು)

ಶ್ರೀ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದೇ ವಿಚಾರದ ಬಗ್ಗೆ ನಾವೂ ಕೂಡ ಮಾತನಾಡಬೇಕಾಗಿದೆ. ಇವರು ಪದೇ ಪದೇ ಧರಣಿಗೆ ಶರಣುಹೋದರೆ ಕಷ್ಟ ಆಗುತ್ತದೆ. ಸರ್ಕಾರಕ್ಕೆ ವಿಷಯವನ್ನು ತಿಳಿಸಿ ಧರಣಿ ಮಾಡಿದರೆ ಅಡ್ಡಿ ಇಲ್ಲ. ವಿಷಯವೇ ಜಗತ್ತಿಗೆ ಗೊತ್ತಾಗದೆ ಇದ್ದರೆ ತಾವು ಧರಣಿ ಕುಳಿತು ಏನೂ ಪ್ರಯೋಜನ ಇಲ್ಲ.

ಅಧ್ಯಕ್ಷರು : ದಯಮಾಡಿ ತಮಗಾಗಿ ಒದಗಿಸಿರುವ ಆಸನದಲ್ಲಿ ಆಸೀನರಾಗಿ ವಾಟಾಳ್‌ರವರೇ ದಯಮಾಡಿ ಸಹಕರಿಸಿ. ಸಾಮಾನ್ಯವಾಗಿ ನಮ್ಮ ಎಲ್ಲಾ ಸದಸ್ಯರು ಬಿಳಿ ಉಡುಪನ್ನು ಬಹಳ ಪ್ರಯಾಸ ಪಟ್ಟು ವಾಷ್ ಮಾಡಿಸಿ ಹಾಕಿಕೊಂಡು ಬರುತ್ತಾರೆ. ಅದಕ್ಕಾಗಿ ನಮ್ಮ ಚೇರ್ಸ್ ಎಲ್ಲಾ ನೀಟಾಗಿ ಇಟ್ಟಿರುತ್ತೇವೆ. ಅಲ್ಲಿ ಕೊಳೆ ಇರುತ್ತದೆ. ನೀವು ಅಲ್ಲಿ ಕುಳಿತು ಕೊಂಡು ಆ ಬಟ್ಟೆಯನ್ನೆಲ್ಲಾ ಕೊಳೆ ಮಾಡಿಕೊಳ್ಳುವುದು ಬೇಡ. ನನಗೆ ನಿಮ್ಮ ಮೇಲೆ ಇರುವುದಕ್ಕಿಂತ ಆ ಬಟ್ಟೆ ಮೇಲೆ ಪ್ರೀತಿ ಅದು ಶುಭ್ರವಾಗಿರಲಿ ಅಂತ. ಈಗ ಕಲಾಪವನ್ನು ಪ್ರಾರಂಭ ಮಾಡೋಣ. ಶ್ರೀ. ಶಿವಾನಂದನಾಯ್ಕ್

ರವರೇ, ತಮಗೆ ಇವತ್ತು ಗೃಹಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ. ಇದು ನನ್ನ ಜವಾಬ್ದಾರಿ. ಶ್ರೀ ಕಾರಜೋಳ ಅವರೇ, ನೀವು ನೋಟೀಸ್ ಕೊಟ್ಟಿರುವ ಕೋರ್ಟ್ ವಿಚಾರ ಆ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ದಯಮಾಡಿ ಸಹಕರಿಸಿ. ಗುರುಪಾದಪ್ಪನವರೇ, ನಿಮ್ಮ ಫೆಡರೇಷನ್ ಗಲಾಟೆ ಬಗ್ಗೆ ಶ್ರೀನಿವಾಸ ಗೌಡರಿಗೆ ಹೇಳಿದ್ದೇನೆ. ಅವರು ಊಟಕ್ಕೆ ಹೋಗಿದ್ದಾರೆ. ಅವರು ಸದನಕ್ಕೆ ಬಂದಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ. ಕೆ. ಎಸ್. ಪುಟ್ಟಣ್ಣಯ್ಯ : ಹತ್ತಿ ಬೀಜದ ವಿಷಯವಾಗಿ ಬಹಳಷ್ಟು ಗಲಾಟೆ ಆಗಿದೆ. ಆದ್ದರಿಂದ ಇದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

ಶ್ರೀ. ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಹತ್ತಿ ಬೀಜದ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಎರಡು ನಿಮಿಷದಲ್ಲಿ ನಾನು ಉತ್ತರ ಹೇಳಿಬಿಡುತ್ತೇನೆ.

ಅಧ್ಯಕ್ಷರು : ಬೇಡ, that will set a new precedent, Because Other business is waiting for me. I have to take up the other business. Kindly cooperate.

ಶ್ರೀ. ಮಲ್ಲಿಕಾರ್ಜುನ ಖರ್ಗೆ : ಹತ್ತಿಬೀಜದ ವಿಷಯವಾಗಿ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ ಮತ್ತು ಇದರ ಬಗ್ಗೆ ಮಾತನಾಡುವುದಕ್ಕೆ ಅನೇಕ ಸದಸ್ಯರೂ ಕೂಡ ಕಾದು ಕುಳಿತಿದ್ದಾರೆ. ಆದ್ದರಿಂದ ಇದರ ಬಗ್ಗೆ ಎಲಾಬರೇಟ್ ಸ್ಟೇಟ್‌ಮೆಂಟ್ ಮಾಡಿದರೆ ಒಳ್ಳೆಯದು.

ಶ್ರೀ. ಸಿ. ಬೈರೇಗೌಡ : ಸ್ಟೇಟ್‌ಮೆಂಟ್‌ಗಿಂತ, ಆ ರೀತಿ ಹೇಳಿಕೆ ನೀಡಿದರೆ ಅದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ಅದರಲ್ಲಿ ಯಾರ್ಯಾರಿಗೆ ಶ್ರದ್ಧೆ ಇದೆ ಅವರನ್ನೆಲ್ಲಾ ಕರೆದು ಮಾತನಾಡುವುದಕ್ಕೆ ನಾನು ಸಿದ್ದನಿದ್ದೇನೆ. ಅದರಲ್ಲಿ ಕೆಲವು ವಿಚಾರಗಳನ್ನೆಲ್ಲಾ ಬಹಿರಂಗವಾಗಿ ಹೇಳಿದರೆ ಪ್ರತಿಕೂಲವಾದಂಥ ಪರಿಣಾಮ ಬೀರುವ ಪರಿಸ್ಥಿತಿ ಇದೆ. ನಿಮ್ಮನ್ನೆಲ್ಲಾ ಕರೆದು ಮಾತನಾಡಿ ಅದರಲ್ಲಿ ವಾಸ್ತವಾಂಶ ಏನು ಇದೆ ಅದನ್ನು ನಿಮಗೆ ವಿವರಿಸುತ್ತೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೇ, ಹತ್ತಿ ಬೀಜದ ವಿಚಾರವಾಗಿ ಆ ಮೇಲೆ ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇವೆ. ಚರ್ಚೆಗೆ ತೆಗೆದುಕೊಂಡು ಅದಕ್ಕೆ ಸಮರ್ಪಕವಾಗಿ ಉತ್ತರವನ್ನು ಸಂಬಂಧಪಟ್ಟವರಿಂದ ಕೊಡಿಸಿಕೊಡುತ್ತೇವೆ. ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ.

(ಈ ಹಂತದಲ್ಲಿ ಶ್ರೀ. ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಎಂಡೋಮೆಂಟ್ ಬಿಲ್ ಬಗ್ಗೆ ಜಂಟಿ ಸದನ ಸಮಿತಿ ಮಾಡಿ, ನಂತರ ಅದು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದೆ. ಆ ಸಮಿತಿಯಲ್ಲಿ ನಾವೆಲ್ಲಾ ಇದ್ದೆವು. ಕಾರಣಾಂತರದಿಂದ ಅದನ್ನು ಸದನದ ಮುಂದೆ ತಂದಿರಲಿಲ್ಲ. ಈ ಸಲ ಸರ್ಕಾರ ತರುತ್ತದೆಂದು ನಂಬಿದ್ದೆವು.

MR. SPEAKER : It is a relevant issue, ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಇಲ್ಲಿ ಇಲ್ಲ, ಅವರು ಮೇಲ್ಮನೆ ಸದನಕ್ಕೆ ಹೋಗಿದ್ದಾರೆ. ಅವರು ಈ ಸದನದಲ್ಲಿ ಇದ್ದಾಗ ತಾವು